

ಡಾರ್ಜಿಲಿಂಗ್ ನಗರದ ಇಳಿಸಂಜೆಯಲ್ಲಿ ಬಿತ್ತರಗೊಳ್ಳುವ ಪರ್ವತಶ್ರೇಣಿಗಳ ಚೆಲುವು

## ನಿಂತ ನೆಲ–ನಿಲುಕದ ನೆಲೆ

# ಸೂರಿಲ್ಲದ ಟಿಬೆಟಿನವರ ಜೊತೆಗೊಂದು ಸ್ವಗತ

**ಕಾಂಚನಜುಂಗಾ ಗಿರಿಶಿಖರ ಶ್ರೇಣಿಗಳ ಅಪೂರ್ವ ಚೆಲುವಿನ ಜೊತೆಜೊತೆಗೆ ನಿರಾಶ್ರಿತ ಟಿಬೆಟನ್ನರ ಬದುಕಿನ ಸಂದಿಗ್ಧತೆ, ಆಶಯಗಳನ್ನೂ ಕಾಣಿಸುವ ಈ ಪ್ರವಾಸ ಪ್ರಬಂಧ, ದೇಶ–ಭಾಷೆ, ಊರು–ಗಡಿಗಳ ಹಲವು ಗಂಟು ನಂಟುಗಳನ್ನು ಹೊಸ ರೀತಿಯಲ್ಲಿ ಪರಿಭಾವಿಸುವ ನೋಟವನ್ನು ಸಹೃದಯರ ಮುಂದಿಡುತ್ತಿದೆ.**

■ **ಎಸ್. ಸಿರಾಜ್ ಅಹಮದ್**

ಪಶ್ಚಿಮ ಬಂಗಾಳದ ಬಾಗ್‌ಡೋಗ್ರಾ ವಿಮಾನ ನಿಲ್ದಾಣದಿಂದ ಸಿಕ್ಕಿಂ ರಾಜಧಾನಿ ಗ್ಯಾಂಗ್‌ಟಾಕ್‌ಗೆ ಹೋಗುವ ದಾರಿ ಸಿಲಿಗುರಿಯನ್ನು ಸುಮಾರು 10–15 ಕಿ.ಮೀ. ದೂರದಿಂದ ತಡವಿ ಹೋಗುತ್ತದೆ ಎಂದಾಗಲೇ ನನಗೆ ಮೌಲಾನಾ ಯಾಕೂಬ್ ಅಶ್ರಫಿ ಅವರ ನೆನಪು ಆವರಿಸಿಕೊಂಡಿತು. ಸುಮಾರು 20–25 ವರ್ಷಗಳಿಂದ ನಮ್ಮೂರಿನ ಮಕ್ಕಾ ಮಸೀದಿಯ ಮುಖ್ಯ ಇಮಾಮರಾಗಿ ಕೆಲಸ ಮಾಡುತ್ತಿದ್ದ ಅವರು ಪ್ರತಿ ನಮಾಜಿನಲ್ಲಿ 'ಯಾ ಮೌಲಾ ಓ ಮಕ್ಕಾ ಕೈಸಾ ಶಹರ್ ದಿಖಾ ದೇ ಅಲ್ಲಾ ಓ ಮದೀನಾ ಕೆ ಗಲಿಯೋಂಕಾ ಸೆಹರ್ ಕರಾ ದೇ ಮೌಲಾ...' ಎಂದು ಪ್ರಾರ್ಥಿಸುತ್ತ ನಮಗೆಲ್ಲ ಮಕ್ಕಾ ಎಂಬ ಪವಿತ್ರ ಶಹರದ... ಮದೀನಾ ಪಟ್ಟಣದ ಬೀದಿಗಳು ಹೇಗಿರಬಹುದು... ಆ ಸಕಲ ಕಲ್ಯಾಣ ಪುಣ್ಯಗಳ ಊರುಗಳ ಬೆಳಗು ಬಿಸಿಲು ಹೇಗಿರಬಹುದು... ಎಂಬ ನೂರಾರು ಕಲ್ಪನೆಗಳನ್ನು ತೇಲಿಬಿಡುತ್ತಿದ್ದರು.

ಹೀಗೆ ಹೇಳುವ ಮೌಲಾನಾ ಅಶ್ರಫಿ ನಮ್ಮ ಮನೆಗೆ ಬಂದಾಗ ತಮ್ಮೂರಾದ ಸಿಲಿಗುರಿ, ಅಲ್ಲಿನ ಮಳೆ, ಭೋರಿಡುವ ನದಿಗಳು, ಬಿಸಿಲನ್ನು ಕುರಿತು ಹೇಳುತ್ತಿದ್ದರು. ಮಕ್ಕಳಾದ ನಮಗೆ, ಮಕ್ಕಾ ಮದೀನಾದ ಪವಿತ್ರ ಶಹರುಗಳ ಹಾಗೆಯೇ ಅವರೂರಾದ ಸಿಲಿಗುರಿಯನ್ನೂ ನೋಡಬೇಕೆಂಬ ಆಸೆಯುಂಟಾಗಿ ಅವು ಯಾವ ದಿಕ್ಕಿನಲ್ಲಿವೆಯೋ ಎಂಬುದು ಗೊತ್ತಾಗದೆ ಗಲಿಬಿಲಿಯುಂಟಾಗುತ್ತಿತ್ತು.

ಇಷ್ಟೊಂದು ವರ್ಷಗಳ ತರುವಾಯ ಈಗ ನಾನು ಸಿಲಿಗುರಿಯ ಆಸುಪಾಸಿನಲ್ಲಿ ಓಡಾಡುತ್ತಿರುವಾಗ ಅವರೀಗ ಹೇಗಿರಬಹುದೆಂದು ಊಹಿಸುತ್ತಿದ್ದೆ. ಸುಮಾರು 30 ವರುಷಗಳ ಕಾಲ ದುರ್ಗ, ದಾವಣಗೆರೆ, ತರೀಕೆರೆ, ಹಾಸನ, ಅರಸೀಕೆರೆಗಳ ಸಣ್ಣಪುಟ್ಟ ಮಸೀದಿಗಳಲ್ಲಿ ಮೌಲವಿಯಾಗಿ ಕೆಲಸ ಮಾಡಿದ ಯಾಕೂಬ್ ಅಶ್ರಫಿಯವರು ಆಮೇಲೆ ಸಿಲಿಗುರಿಗೆ ವಾಪಸಾದರು ಎಂದು ನಮ್ಮ ತಂದೆ ಹೇಳಿದ್ದು ನೆನಪಾಯಿತು. ಅವರೀಗ ಸಿಕ್ಕರೂ ಕಾಲ–ದೇಶಗಳ ಹಲವು ಅಂತರದಲ್ಲಿ ಎಲ್ಲೆಲ್ಲೋ ಹಂಚಿಹೋಗಿದ್ದ ನಾನು ಅವರನ್ನು ಹೇಗೆ ಎದುರಾಗುವುದು ಎಂಬುದೂ ದೊಡ್ಡ ಪ್ರಶ್ನೆಯಾಗಿತ್ತು.

ಹೀಗೇ ಕಾಲ ಉರುಳುರುಳಿ, ನಾವು ಸಿಲಿಗುರಿ ತಾಕಿ ಹೋಗುತ್ತಿದ್ದೇವೆ ಎಂದು ಕಾರಿನ ಡ್ರೈವರ್ ಹೇಳಿದಾಗ ಬಾಲ್ಯದ ಕನಸಿನ ಸಿಲಿಗುರಿಯನ್ನು ನೋಡದೆ ಹೇಗೆ ಹೋಗುವುದೆಂಬ ಸಂಕಟ ಕಾಡುತಿತ್ತು. ಕನಸಿನ ರೂಹುಗಳಿಗೂ ನಿಜ ಬದುಕಿನ ದೊಡ್ಡ ಕೊರಕಲುಗಳಿಗೂ ಇರುವ ಸಾಕ್ಷಿಯಂತೆ ನಮ್ಮ ಕಾರು ತೀಸ್ತಾ ನದಿಯ ಭಾರೀ ಕಂದಕದ ಅಂಚಿನ ಸೂಜಿ ಮೊನೆಯಷ್ಟು ಅಗಲದ ಕಿರುದಾರಿಯಲ್ಲಿ